ಪ್ರಕಾಶ
**ಪಿಡಬ್ಲ್ಯೂ-4**

**ದಿನಾಂಕ 19.02.2025 ರಂದು** ಸಾಕ್ಷಿಗೆ **ಪ್ರಮಾಣ ವಚನ ಬೋಧಿಸಲಾಯಿತು.**
ಪಾಟಿ ಸವಾಲು ಪ್ರತಿವಾದಿಯರ ಪರ ಶ್ರೀ ಜಿ ಎಂ ವಕೀಲರವರಿಂದಃ

ಪಿಡಬ್ಲ್ಯೂ**-3** ಲಕ್ಷ್ಮಣ ನನ್ನ ಚಿಕ್ಕಪ್ಪ ಎಂದರೆ ಸರಿ. ಈ ದಾವಾ ಸ್ವತ್ತಿನ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಆಜುಬಾಜುವಿನಲ್ಲಿ ನಮ್ಮ ಜಮೀನು ಇದೆ ಎಂದು ಸರ್ವೆ ನಂಬರನ್ನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ತಿಳಿಸಲಾಗಿದೆಯಾ ಎಂದರೆ ಇಲ್ಲ ಎಂದು ನುಡಿದರು.

ದಾವಾ ಸ್ವತ್ತು ಹಾಗೂ ಪ್ರತಿವಾದಿಯರ ಸ್ವತ್ತಿನ ಆಜುಬಾಜು ನಮ್ಮ ಜಮೀನು ಇರುವುದಿಲ್ಲ ಎಂದರೆ ಸಾಕ್ಷಿ ಪ್ರತಿವಾದಿಯರ ಜಮೀನಿನ ಪಕ್ಕದಲ್ಲಿ ನಮ್ಮ ಜಮೀನು ಇದೆ. ದಾವಾ ಸ್ವತ್ತಿನ ಆಜುಬಾಜುವಿನಲ್ಲಿ ನನ್ನ ಹೆಸರಿನಲ್ಲಿ **16** ಗುಂಟೆ ನನ್ನ ತಂದೆಯ ಹೆಸರಿನಲ್ಲಿ **16** ಗುಂಟೆ ಜಮೀನು ಇದೆ.

**2.** ಪ್ರತಿವಾದಿಯರ ಜಮೀನಿನ ಉತ್ತರ ದಿಕ್ಕಿಗೆ ರಸ್ತೆ ಇದೆ ಎಂದರೆ ಸರಿಯಲ್ಲ. ಪಿಡಬ್ಲ್ಯೂ-**3** ರವರ ಜಮೀನು ನಮ್ಮ ಜಮೀನಿನ ಪಕ್ಕದಲ್ಲಿದೆ ಎಂದರೆ ಸರಿ. ಪ್ರತಿವಾದಿಯರ ಜಮೀನಿನ ಉತ್ತರ ದಿಕ್ಕಿಗೆ ರಸ್ತೆ ಇದ್ದರೂ ಸಹಾ ಇಲ್ಲ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕನಗನಮರಡಿ ಗ್ರಾಮದ ನಕ್ಷೆಯನ್ನು ನಾನು ನೋಡಿರುತ್ತೇನೆ ಎಂದು ನುಡಿದರು. ಗ್ರಾಮದ ನಕ್ಷೆಯಂತೆ ಪ್ರತಿವಾದಿಯರ ಜಮೀನಿನ ಉತ್ತರ ದಿಕ್ಕಿಗೆ ರಸ್ತೆ ಇದೆ ಎಂದು ಉಲ್ಲೇಖವಾಗಿರುತ್ತದೆ ಎಂದರೆ ಸಾಕ್ಷಿಯು ಪೂರ್ವ ದಿಕ್ಕಿಗೆ ರಸ್ತೆ ಇರುವುದಾಗಿ ನಮೂದಾಗಿರುತ್ತದೆ ಎಂದು ನುಡಿದರು. ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಪ್ರತಿವಾದಿಯರ ಜಮೀನಿನ ಉತ್ತರ ದಿಕ್ಕಿಗೆ ರಸ್ತೆ ಇದ್ದರೂ ಸಹಾ ಇಲ್ಲ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**3.** **2** ವರ್ಷಗಳ ಹಿಂದೆ ನ್ಯಾಯ ಪಂಚಾಯತಿಗಾಗಿ ಊರಿನ ಹಿರಿಯರು ಸೇರಿರುತ್ತಾರೆ, ಅವರ ಹೆಸರುಗಳು ನನಗೆ ಗೊತ್ತಿಲ್ಲ. ಜಮೀನಿನ ಆಜುಬಾಜುದಾರರಾದ ಗುರುರಾಜ, ನಾಗಣ್ಣ, ಶ್ರೀನಿವಾಸರವರು ಪಂಚಾಯತಿಗೆ ಸೇರಿದ್ದರು. ಪಂಚಾಯತಿ ತೀರ್ಮಾನದಂತೆ ಪೂರ್ವಜರ ಕಾಲದಿಂದಲೂ ಪೂರ್ವ ದಿಕ್ಕಿಗೆ ಇರುವ ರಸ್ತೆಯಲ್ಲೇ ಓಡಾಡುತ್ತಿದ್ದಾರೆ, ಅದೇ ರಸ್ತೆಯಲ್ಲೇ ಓಡಾಡಬೇಕೆಂದು ತೀರ್ಮಾನವಾಗಿರುತ್ತದೆ. ಯಾವುದೇ ನ್ಯಾಯ ಪಂಚಾಯತಿಯಾಗಿ ತೀರ್ಮಾನವಾಗಿರುವುದಿಲ್ಲ ಎಂದರೆ ಸರಿಯಲ್ಲ.

**4.** ನಮ್ಮ ಜಮೀನಿಗೂ ಸಹಾ ಪೂರ್ವ ದಿಕ್ಕಿನ ರಸ್ತೆಯಲ್ಲಿ ಹೋಗಬಹುದು ಎಂದು ಪ್ರತಿವಾದಿಯರ ಜಮೀನಿನ ಪೂರ್ವ ದಿಕ್ಕಿಗೆ ರಸ್ತೆ ಇಲ್ಲದೇ ಇದ್ದರೂ ಇದೆ

ಪ್ರಕಾಶ
**ಪಿಡಬ್ಲ್ಯೂ-4**

ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಮತ್ತು ವಾದಿಯರು ಪ್ರತಿವಾದಿಯರ ಜಮೀನಿನ ಪೂರ್ವ ದಿಕ್ಕಿಗೆ ರಸ್ತೆಯನ್ನು ಬಿಟ್ಟುಕೊಂಡಿರುತ್ತೇವೆ ಎಂದರೆ ಸಾಕ್ಷಿಯು ನಮ್ಮ ಜಮೀನುಗಳ ಪೂರ್ವ ದಿಕ್ಕಿಗೆ ಇರುವ ರಸ್ತೆಯನ್ನು ನಾವು ಬಿಟ್ಟಿರುವುದಿಲ್ಲ, ಸದರಿ ರಸ್ತೆ ಸರ್ಕಾರಿ ರಸ್ತೆ ಎಂದು ನುಡಿದರು. ಪ್ರತಿವಾದಿಯರ ಜಮೀನಿನ ಪೂರ್ವ ದಿಕ್ಕಿಗೆ ಇರುವ ರಸ್ತೆ ಸರ್ಕಾರಿ ರಸ್ತೆಯಾಗಿರುವುದಿಲ್ಲ, ಅವರ ಜಮೀನಿನ ಉತ್ತರ ದಿಕ್ಕಿಗೆ ಇರುವ ರಸ್ತೆ ಸರ್ಕಾರಿ ರಸ್ತೆಯಾಗಿರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.**

**ಸಾ.ಓ.ಹೇ.ಸ.ಇದೆ.**

2 ನೇ ಅಪರ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ, ಪಾಂಡವಪುರ